ಈರನಹಟ್ಟಿ ಗ್ರಾಮದ ನೀರು ಸರಬರಾಜು ಯೋಜನೆಯ ರೈಸಿಂಗ್ ಮೇನ್, ವಿತರಣಾ ವ್ಯವಸ್ಥೆ, ನಲ್ಲಿಗಳು ಮತ್ತು ಮೇಲ್ಮಟ್ಟದ ಜಲ ಸಂಗ್ರಾಹಾಲಯದ ಕೆಲಸಗಳು ಪೂರ್ಣ ಗೊಂಡಿರುತ್ತವೆ,

ಅವಲಂಬಿಸತಕ್ಕ ಜಲಮೂಲವನ್ನು ಸ್ಥಿರಪಡಿಸಿ, ಇನ್ನು ಆರು ತಿಂಗಳಲ್ಲಿ ಜನರಿಗೆ ನೀರನ್ನು ಪೂರೈಕೆ ಮಾಡಲಾಗುವುದು.

ಬೆಂಗಳೂರು ಉತ್ತರ ತಾಲ್ಲೂಕಿನ ಚೋಳ ನಾಯಕನ ಹಳ್ಳಿಗೆ ಒಳ ಚರಂಡಿ ವ್ಯವಸ್ಥೆ ಬಗ್ಗೆ

ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ),---ಮಾನ್ಯ ಗ್ರಾಮಾಣಾಭಿವೃದ್ಧಿ. ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಚೋಳ ನಾಯಕನ ಹಳ್ಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸು ವಂತೆ ಕೋರಿ ಮನವಿಗಳೇನಾದರೂ ಸರ್ಕಾರದವರಿಗೆ ಬಂದಿವೆಯೇ ?

ಆ) ಹಾಗಿದ್ದಲ್ಲಿ ಈ ಮನವಿಯ ಮೇಲೆ ಕೈಗೊಂಡ ಕ್ರಮಗಳೇನು ?

ಇ) ಎಷ್ಟು ಸಮಯದೊಳಗೆ ಮೇಲ್ಕಂಡ ಹಳ್ಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸ ಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ವಸತಿ ಮಂತ್ರಿ ಮತ್ತು ಪಕ್ಷ ಮಂತ್ರಿಗಳು).-

ಅ) ಇದರ ಬಗ್ಗೆ ರಾಷ್ಟ್ರೀಯ ಗ್ರಾಮಾಣ ಉದ್ಯೋಗ ಕಾರ್ಯಕ್ರಮದ ಅಡಿಯಲ್ಲಿ ಯಾವ ತರಹ ಮನವಿಗಳು ಈ ಬಗ್ಗೆ ಬಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಒಳಚರಂಡಿಯ ಕಾರ್ಯಕ್ರಮದ ಬಗ್ಗೆ ವಿಶೇಷ ಜಿಲ್ಲಾಧಿಕಾರಿ (ಅಭಿವೃದ್ಧಿ) ಬೆಂಗಳೂರು ತನಿಖೆ ಮಾಡಿ ಸಾಕಷ್ಟು ಹಣ ಇದ್ದರೆ ಈ ವರ್ಷವೇ ತೆಗೆದುಕೊಳ್ಳಬೇಕಾಗಿ ಸೂಚನೆ ನೀಡಲಾಗಿದೆ.

ಗ್ರಾಮಾಣ ಪ್ರದೇಶಗಳಲ್ಲಿ ಹುಡ್ಕೋ ಯೋಜನೆಯನ್ವಯ ಮನೆಗಳನ್ನು ಕಟ್ಟಿಕೊಡುವ ಬಗ್ಗೆ

೪೧೮ ಶ್ರೀ ಪಿ.ಸಿ. ಸಿದ್ದನ ಗೌಡರ (ಕಲಘಟಗಿ).---ಮಾನ್ಯ ಗ್ರಾಮಾಣ ಅಭಿವೃದ್ಧಿ ಮತ್ತು ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಗ್ರಾಮಾಣ ಪ್ರದೇಶಗಳಲ್ಲಿ ಹುಡ್ಕೋ ಯೋಜನೆ ಅನ್ವಯ ಅಥವಾ ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳನ್ನು ಕಟ್ಟಿಕೊಡುವ ವಿಚಾರದಲ್ಲಿ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ ಮತ್ತು ಪಕ್ಷ ಮಂತ್ರಿಗಳು).--

ಗ್ರಾಮಾಂತರ ಪ್ರದೇಶಗಳಲ್ಲಿ ಹುಡ್ಕೋ ನೆರವಿನಿಂದ ಜನತಾ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯ ನೀಡುವ ಯೋಜನೆ ಈಗಾಗಲೇ ಜಾರಿಯಲ್ಲಿದೆ.

ಕರ್ನಾಟಕ ಗೃಹ ಮಂಡಳಿ ಸಾಧಾರಣವಾಗಿ ನಗರ ಪ್ರದೇಶಗಳಲ್ಲಿ ವಸತಿ ಯೋಜನೆಗಳನ್ನು ತೆಗೆದು ಕೊಳ್ಳುತ್ತಿದೆ. ಹುಡ್ಕೋ ಸಂಸ್ಥೆಯ ಪರಿಷ್ಕೃತ ನಿಯಮಗಳಂತೆ ಮಂಡಳಿ ೫೫-೧೨-೧೯೮೫ ರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಯೋಜನೆಗಳನ್ನು ತೆಗೆದುಕೊಳ್ಳುವ ಅವಕಾಶವಿದ್ದು ಮಂಡಳಿ ಈ ದಿಶೆಯಲ್ಲಿ ಯೋಜಿಸುತ್ತಿದೆ.